ಅಧ್ಯಕ್ಷರು: ವಿಧೇಯಕವನ್ನು ಮಂಡಿಸಲಾಯಿತು.

ಶ್ರೀ ಬಿ.ಎಸ್.ಯಡಿಯೂರಪ್ಪ (ಉಪಮುಖ್ಯಮಂತ್ರಿಗಳು): ಮಾನ್ಯ ಅಧ್ಯಕ್ಷರೆ, ಈ ರಾಜ್ಯದಲ್ಲಿ ಪ್ರವಾಸೋದ್ಯಮವನ್ನು ಅಭಿವೃದ್ಧಿಪಡಿಸುವ ದೃಷ್ಟಿಯಿಂದ ಮತ್ತು ಹೆಚ್ಚು ಬಂಡವಾಳವನ್ನು ಆಕರ್ಷಣೆ ಮಾಡುವ ದೃಷ್ಟಿಯಿಂದ ಈ ಅಮ್ಯೂಸ್‌ಮೆಂಟ್ ಪಾರ್ಕ್‌ಗಳಿಗೆ ತೆರಿಗೆ 10% ಇತ್ತು. ಅದನ್ನು 5% ಇಳಿಸುವುದಕ್ಕೆ ಪ್ರಸ್ತಾಪ. ಉದಾಹರಣೆಗೆ ನಮ್ಮ ರಾಜ್ಯಗಳಾದ ಗುಜರಾತ್, ಕೇರಳ, ಮಹಾರಾಷ್ಟ್ರಗಳಲ್ಲಿ ಅವರು 100% ರಷ್ಟು ಮನೋರಂಜನಾ ತೆರಿಗೆಯ concenssion ಅನ್ನು ಅವರು ಕೊಟ್ಟಿದ್ದಾರೆ. Cabinet ನಲ್ಲಿ ಇದರ ಬಗ್ಗೆ ಸುದೀರ್ಘವಾಗಿ ಚರ್ಚೆಯಾಯಿತು. 10% ದಿಂದ 5% ಗೆ ಈ ಮನೋರಂಜನಾ ತೆರಿಗೆಯನ್ನು ಈ ಅಮ್ಯೂಸ್‌ಮೆಂಟ್ ಪಾರ್ಕ್‌ಗಳಿಗೆ ಇಳಿಸಬೇಕು ಎನ್ನುವಂಥದ್ದು, ಅದಕ್ಕೆ ತಾವು ಅನುಮತಿಯನ್ನು ಕೊಡಬೇಕೆಂದು ಕೇಳುತ್ತೇನೆ.

ಶ್ರೀ ಜೆ.ಸಿ.ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ): ತಾವು ಉದ್ದೇಶದಿಂದ clear ಆಗಿ ಹೇಳಿಲ್ಲ. ನಾನು ಹೇಳುತ್ತೇನೆ turf activities 5% ಗೆ ಇಳಿಸಿಬಿಟ್ಟರೆ ನಾವು ಏನು ಮಾಡುವುದು. ಜೂಜು ಯಾವುದು, ಈ ಅಮ್ಯೂಸ್‌ಮೆಂಟ್ ಯಾವುದು, ಯಾವ್ಯಾವ item ಮೇಲೆ ತೆರಿಗೆ ಇಳಿಸುತ್ತೀರಿ ಎನ್ನುವುದನ್ನು ನೀವು ಹೇಳಬೇಕಲ್ಲಾ? ನಮಗೆ ಈ Act copy ಇಲ್ಲ. clear ಆಗಿ ಏನು ಇಲ್ಲ. 10% ದಿಂದ 5% ಗೆ ಇಳಿಸಬೇಕು to encourage tourism. ಯಾವ activities ಮೇಲೆ, ನೀವು ನಾಳೆ ಇದನ್ನೆ apply ಮಾಡಿ race course ನಲ್ಲಿ ಇಳಿಸಿ ಬಿಟ್ಟರೆ ಏನು ಗತಿ. This leads to complications. ಈ ಬಿಲ್‌ನಲ್ಲಿ ಏನು clear ಆಗಿ ಇಲ್ಲ ಸರ್.

ಶ್ರೀ ಧರ್ಮಸಿಂಗ್ (ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ, ಪ್ರವಾಸೋದ್ಯಮಕ್ಕೆ ಇವರು ಹೆಚ್ಚಿನ ಉತ್ತೇಜನ ಕೊಡಬೇಕು ಎನ್ನುವ ದೃಷ್ಟಿಯಿಂದ 10% ದಿಂದ 5% ಮಾಡಿರುವುದಕ್ಕೆ ನಾವು ಒಪ್ಪುತ್ತೇವೆ. ಇದರಿಂದ ಯಾರಿಗೆ ಎಷ್ಟು ಲಾಭ ಎನ್ನುವುದು ಕೂಡ ತಾವು ಕೊಡಬೇಕು. ಮಾಧುಸ್ವಾಮಿಯವರು ಹೇಳಿದ ಹಾಗೆ ನೀವು ಬೇರೆಯದ್ದಕ್ಕೆ ವಿನಾಯಿತಿಯನ್ನು ಕೊಡುತ್ತಾ ಹೋದರೆ ಹೇಗಾಗುತ್ತದೆ. ಅದಕ್ಕೆ ನೀವು Act ನಲ್ಲಿ clearly

you have to specify ಪೂರ್ಣ ಹೇಳಿ ವಿವರವನ್ನು ಕೊಡಬೇಕು. ಕೇರಳ ರಾಜ್ಯದಲ್ಲಿ ಮತ್ತು ಬೇರೆ ಬೇರೆ ರಾಜ್ಯದಲ್ಲಿ ಪ್ರವಾಸೋದ್ಯಮದ ಬಗ್ಗೆ ರಿಯಾಯಿತಿ ಕೊಟ್ಟಿದ್ದಾರೆ, ಕರ್ನಾಟಕದಲ್ಲಿಯೂ ಕೊಡಬೇಕೆಂದು ಹೇಳಿ, ಈ ಮನೋರಂಜನಾ ಹೆಸರಿನಲ್ಲಿ ಲಾಭ ಪಡೆಯುತ್ತಾರೆ ಮತ್ತು ಇದು ತಪ್ಪಾಗುತ್ತದೆ. ಮನೋರಂಜನಾ ತೆರಿಗೆಯನ್ನು 10% ದಿಂದ 5% ಗೆ ಏನು ಇಳಿಸುತ್ತಿದ್ದಾರೆ. ಕೇವಲ encouragement to tourism department to Karnataka State ಎನ್ನತಕ್ಕಂಥದ್ದು ಅದು ಬೇರೆ. ಅದಕ್ಕೆ ಎಲ್ಲಾ ವಿವರವನ್ನು ಕೊಡಬೇಕು.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ): ಮಾನ್ಯ ಅಧ್ಯಕ್ಷರೆ, ತಾವು ಪ್ರವಾಸೋದ್ಯಮ ಪ್ರೋತ್ಸಾಹಿಸುವುದಕ್ಕಾಗಿ ಎಂದು ತಾವು ಹೇಳಿರುವಾಗ, ವಿನೋದಾವಳಿಗಳು ಎಂದರೆ ಯಾವುವು ಎನ್ನುವುದು ನಮಗೆ ಬೇಕು. ವಿನೋದಾವಳಿಗಳು ಅದರ ಮಾಲೀಕರು ಯಾರು? ಖಾಸಗಿಯವರು ಬೇರೆ ಯಾರು ಎನ್ನುವುದನ್ನು ಇವೆಲ್ಲವನ್ನು ಸ್ಪಷ್ಟಪಡಿಸಬೇಕಾಗುತ್ತದೆ. ಇಲ್ಲಿ ವಿನೋದಾವಳಿಗಳು ಎಂದರೆ ನಾನಾ ರೀತಿ ಹೋಗುತ್ತವೆ. ಮನೋರಂಜನಾ ಎನ್ನುವುದಕ್ಕೆ ಸ್ಪಷ್ಟಪಡಿಸಬೇಕಾಗುತ್ತದೆ. ಇಲ್ಲದಿದ್ದರೆ ಎಲ್ಲಾ ಮನೋರಂಜನೆಗೂ ಆಗುತ್ತದೆ. ಸಿನಿಮಾ ಕೂಡ ಮನರಂಜನೆ, ಕ್ಯಾಬರೆ ಮನರಂಜನೆ ಇದರಲ್ಲಿ ಬರುತ್ತವೆ. ಅದಕ್ಕೆ ಸರ್ಕಾರ ಪ್ರವಾಸೋದ್ಯಮವನ್ನು ನೀವು ಕರ್ನಾಟಕದಲ್ಲಿ ಉದ್ಧಾರ ಮಾಡಬೇಕು. ಬೆಳವಣಿಗೆ ಮಾಡಬೇಕು ಅದಕ್ಕೆ ನಮ್ಮದೇನು ಅಭ್ಯಂತರವಿಲ್ಲ. ಆದರೆ ನೀವು ಕಡಿತ ಮಾಡತಕ್ಕಂಥದ್ದು ಯಾವುದು ಎನ್ನುವುದನ್ನು ಸ್ಪಷ್ಟಪಡಿಸಬೇಕು. ಆಗ ಅದು ಸರಿ ಹೋಗುತ್ತದೆ. ಇಲ್ಲದಿದ್ದರೆ ಅದು ಸರಿ ಕಾಣುವುದಿಲ್ಲ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ (ಬಾಗೇಪಲ್ಲಿ): ಮಾನ್ಯ ಅಧ್ಯಕ್ಷರೆ, ಇದರಲ್ಲಿ ವಿನೋದಾವಳಿಗಳು ಎನ್ನುವುದು wide concept ಆಗುತ್ತದೆ. ಯಾವುದನ್ನು ಬೇಕಾದರೂ ಅದಕ್ಕೆ ಸೇರಿಸಿಕೊಳ್ಳಬಹುದು. ಎಂಥದನ್ನು ಬೇಕಾದರೂ ಸೇರಿಸಿಕೊಳ್ಳುವ ಅಪಾಯವಿದೆ. ಆದ್ದರಿಂದ ಈ ವಿನೋದಾವಳಿ ಎನ್ನುವುದನ್ನು ಬಿಟ್ಟು ಅದನ್ನು specify ಮಾಡಬೇಕು. ಇಂಥದ್ದನ್ನು ಎಂದು ಹೇಳಬೇಕು ಅಥವಾ ಇಂಥದ್ದನ್ನು ಹೊರತುಪಡಿಸಿದ್ದೇವೆ ಎನ್ನುವಂಥದ್ದನ್ನು ಹೇಳಬೇಕು.

ಇಂತಹ items ಅನ್ನು entertainment ದಿಂದ ಹೊರತು ಪಡಿಸಿ ಎಂದಾದರೂ ಮಂಡಿಸಬೇಕು. ನಿಮ್ಮ ಅಭಿಪ್ರಾಯದಲ್ಲಿರುವ entertainment ಯಾವುದಾದರೂ ಹೇಳಬೇಕಾಗುತ್ತದೆ. ಇಲ್ಲದಿದ್ದರೆ it leads to the opening of pandoras Box ನೀವು ಯಾವುದನ್ನು ಜೂಜಾಡುವುದು, ಕುದುರೆ ರೇಸ್, ಇಸ್ಪೇಟ್, ಅಂಧರ್ ಬಾಹರ್, ಮಟ್ಕಾ ಎಲ್ಲವು ವಿನೋದಾವಳಿಗಳಿಗೆ ಬರುತ್ತವೆ.

ಶ್ರೀ ಎಂ.ಪಿ.ಪ್ರಕಾಶ್ (ಗೃಹ ಮತ್ತು ಕಾನೂನು ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಅಧ್ಯಕ್ಷರೆ, there is a chance of luck. It becomes a gambling. Amusement ಅಂದರೆ ಆಗುವುದಿಲ್ಲ. ಅದಕ್ಕಾಗಿ rummy ಬದಲಾವಣೆ ಮಾಡಿರತಕ್ಕಂಥದ್ದು. ಬೇಕಾದಷ್ಟು ಹೈಕೋರ್ಟ್ ಜಡ್ಜ್‌ಮೆಂಟ್‌ಗಳು ಆಗಿವೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಅಮ್ಯೂಸ್‌ಮೆಂಟ್ ಎಂದು ನೀವು ಹೇಳಲಿಲ್ಲ.

ಶ್ರೀ ಎಂ.ಪಿ.ಪ್ರಕಾಶ್: Amusement is totally different.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ವಿನೋದಾವಳಿಗಳು ಎಂದು ಇದೆ.

ಶ್ರೀ ಎಂ.ಪಿ.ಪ್ರಕಾಶ್: Entertainment ಎಂದು ಅದರ ಅರ್ಥ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಇದು ಹಾಗೆ ಬರುವುದಿಲ್ಲ.

ಶ್ರೀ ಡಿ.ಕೆ.ಶಿವಕುಮಾರ್: Entertainment ಎಂದರೆ watching T.V. also, watching video also any thing ಆಗಲ್ವಾ? ಇವರು ಹೇಳುತ್ತಿದ್ದಾರೆ ಅಮ್ಯೂಸ್‌ಮೆಂಟ್ Ok, You specify, "this is an amusement." ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಇಲ್ಲದಿದ್ದರೆ ಅದು confusion ಆಗುತ್ತದೆ.

ಶ್ರೀ ಡಿ.ಕೆ.ಶಿವಕುಮಾರ್: ಮಕ್ಕಳು ಆಡುವುದಕ್ಕೆ some thing water, ಆಡುವುದಕ್ಕಾದರೆ ನೀವು ಮಾಡಿದರೆ ಪರವಾಗಿಲ್ಲ.

ಶ್ರೀ ಎಂ.ಪಿ.ಪ್ರಕಾಶ್: wide context ಇರತಕ್ಕಂಥ ಸಂದರ್ಭದಲ್ಲಿ ordinarily.

ಶ್ರೀ ಡಿ.ಕೆ.ಶಿವಕುಮಾರ್: ಬೇಕಾದರೆ ಆ 5% ಕೂಡ ತೆಗೆದು ಹಾಕಿಬಿಡಿ ಏನು ತೊಂದರೆ ಇಲ್ಲ. You specify. Yes, this is for this purpose ಎಂದು specify ಮಾಡಿ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ಮಾನ್ಯ ಪ್ರಕಾಶ್‌ರವರೆ ಇದು ಏನಾಗುತ್ತದೆಂದರೆ, law of interpretation ಬಂದಾಗ ಅದನ್ನು ಯಾವ ರೀತಿ ಬೇಕಾದರೂ interpret ಮಾಡತಕ್ಕಂಥದು ಇರುತ್ತದೆ. ಆದ್ದರಿಂದ you speify.

ಶ್ರೀ ಕೆ.ಜಯಪ್ರಕಾಶ್ ಹೆಗ್ಡೆ: ಇಂಥದ್ದಕ್ಕೆ 10% ಇತ್ತು ಅದನ್ನು 5% ಮಾಡುತ್ತೇವೆಂದು ಅದನ್ನಾದರೂ ಹೇಳಿ.

ಶ್ರೀ ಡಿ.ಕೆ.ಶಿವಕುಮಾರ್: ಅದೇ ರೀತಿಯಾಗಿ competitors ಗಳು ತಮ್ಮ ಹತ್ತಿರ ಬಂದು request ಮಾಡಿಕೊಂಡರು. ನಮಗೆ ಅಷ್ಟು ಟ್ಯಾಕ್ಸ್ ಇದೆ ಇದನ್ನು ಕಡಿಮೆ ಮಾಡಬೇಕೆಂದು ಕೇಳಿದರು. ಅದಕ್ಕೇನಾದರೂ ಒತ್ತಡವನ್ನು ಮಾಡಿ ತಾವು ಅದನ್ನು ಏನಾದರೂ ಕಡಿಮೆ ಮಾಡುತ್ತಿದ್ದೀರಾ? ಇಲ್ಲಾ ಟಿ.ವಿ.ಯವರಿಗೆ ಅನುಕೂಲ ಮಾಡಿಕೊಳ್ಳುವುದಕ್ಕೆ ಮಾಡಿದ್ದೀರಾ ಇದನ್ನು ನಮಗೆ ಸ್ಪಷ್ಟಪಡಿಸಬೇಕು.

ಶ್ರೀ ಬಿ.ಎಸ್.ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು ಹಾಗೂ ಹಣಕಾಸಿನ ಸಚಿವರು): ಮಾನ್ಯ ಅಧ್ಯಕ್ಷರೆ, ಬಹಳ ಸ್ಪಷ್ಟವಾಗಿ ನಮ್ಮ ಶಾಸಕರಿಗೆ ಈ ವಿಷಯವನ್ನು ಸ್ಪಷ್ಟಪಡಿಸುವುದಕ್ಕೆ ಇಷ್ಟ ಪಡುತ್ತೇನೆ. amusement ಎಂದು ಹೇಳಿದರೆ, Amusement means any amusement for which persons are required to make payment for admission…….

ಶ್ರೀ ವಾಟಾಳ್ ನಾಗರಾಜ್: ತಾವು ಹೇಳಿದಂತಹ ಪದ ಇಲ್ಲಿ ಇಲ್ಲ. ನಾವು ಹೇಳುವುದನ್ನು ಇಲ್ಲಿ ಸೇರಿಸಿ. ಯಾವುದು ಎಷ್ಟು ಎಂದು ಅಷ್ಟನ್ನು ಹೇಳಿ ಬಿಡಿ.

ಶ್ರೀ ಬಿ.ಎಸ್.ಯಡಿಯೂರಪ್ಪ: 4(ಇ) ನ ಕೊನೆಯ ಪೇಜ್‌ನಲ್ಲಿ ಹೇಳಿದ್ದೇವೆ.

ಶ್ರೀ ವಾಟಾಳ್ ನಾಗರಾಜ್: ಹೇಳಿ ಸಾರ್.

ಶ್ರೀ ಬಿ.ಎಸ್.ಯಡಿಯೂರಪ್ಪ: 4(ಇ) ಏನು ಹೇಳುತ್ತದೆ ಎಂದರೆ, ಅಮ್ಯೂಸ್‌ಮೆಂಟ್ ಪಾರ್ಕ್‌ಗಳಿಗೆ ಮಾತ್ರ ಇದು ಅನ್ವಯವಾಗುವಂತಹದ್ದು. 10% ಇರುವುದನ್ನು 5% ಗೆ ಇಳಿಸುತ್ತಿದ್ದೇವೆ. ಬೇರೆ ರಾಜ್ಯಗಳಲ್ಲಿ ಸಂಪೂರ್ಣವಾಗಿ ವಿನಾಯಿತಿ ಮಾಡಿದ್ದಾರೆ.

ಶ್ರೀ ಎನ್.ಧರ್ಮಸಿಂಗ್: ಇಲ್ಲಿ ಬಿಲ್‌ನಲ್ಲಿ ಮಾಹಿತಿ ಬೇಕಲ್ಲ.

ಶ್ರೀ ಬಿ.ಎಸ್.ಯಡಿಯೂರಪ್ಪ: ಇದೇ ಸಾರ್ ಕೊನೆಯ ಪೇಜ್‌ನಲ್ಲಿ ಸಬ್‌ಮಿಷನ್ ಕಲಂನಲ್ಲಿ ಇದೆ ಸಾರ್. ಇದು ಬೇರೆ ಯಾರಿಗೂ ಅನುಕೂಲ ಮಾಡಿಕೊಡುವ ದೃಷ್ಟಿಯಲ್ಲ. ಇದು ಕೇವಲ ಅಮ್ಯೂಸ್‌ಮೆಂಟ್ ಪಾರ್ಕ್‌ಗೆ ಮಾತ್ರ. ಇದರಲ್ಲಿ definition ಕಲಂನಲ್ಲಿ ಸ್ಪಷ್ಟವಾಗಿದೆ. Section 4(E) says: Amusement means any amusement for which persons are required to make payment for admission to any amusement or amusement park or by whatever name called. ಅವರಿಗೆ ಮಾತ್ರ ಸೀಮಿತವಾಗಿ ಇದನ್ನು ಮಾಡಿರುವುದು.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: It becomes far wider.

ಶ್ರೀ ವಾಟಾಳ್ ನಾಗರಾಜ್: ನೀವು ಇಂತಹದ್ದು ಎಂದು ಹೇಳಿದರೆ ಅನುಕೂಲವಾಗುತ್ತದೆ. ನಿಮಗೂ ಕೂಡ ಅನುಕೂಲವಾಗುತ್ತದೆ. ನಾಳೆ ದಿನ ಮೋಸ ಮಾಡುವುದಕ್ಕೆ ದಾರಿ ಮಾಡಿಕೊಡುತ್ತದೆ.

ಶ್ರೀ ಡಿ.ಕೆ.ಶಿವಕುಮಾರ್: ಅಮ್ಯೂಸ್‌ಮೆಂಟ್ ಪಾರ್ಕ್ ಇಂತಹ ಮಕ್ಕಳು ಆಡುವಂತಹ ಜಾಗ, ಇಂತಹ ಜಾಗ, ಇದು ಕುದುರೆಯಲ್ಲ, ಇನ್ನೊಂದು ಅಲ್ಲ ಎಂದು ಬಹಳ specific ಆಗಿ ಕೊಟ್ಟರೆ ಅಷ್ಟು ಸಾಕು ನಮಗೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ನಮ್ಮ ರಾಜ್ಯದಲ್ಲಿ ವಂಡರ್ ಲಾ, ಜಿ.ಆರ್.ಎಸ್. ಫ್ಯಾಂಟಸಿ ಪಾರ್ಕ್, club ಪಾರ್ಕ್ ಎಂದು 9 ಇವೆ. ಇವರು ಬೇರೆ ಬೇರೆ ರಾಜ್ಯಗಳಲ್ಲಿ ನಮಗೂ ಕೂಡ ಫ್ರೀ ಮಾಡಿಕೊಡಿ ಎಂದು ಕೇಳಿದ್ದರು. ನಾನು ಇದರ ಬಗ್ಗೆ ಅನೆಕ್ಚರ್‌ನಲ್ಲಿ ಅದರ ಉದ್ದೇಶವನ್ನು ಹೇಳಿದ್ದೇನೆ. 4E ನಲ್ಲಿ Tax on Amusement, ಎನ್ನುವುದರ ಬಗ್ಗೆ ನಾವು

ಸ್ಪಷ್ಟವಾಗಿ ಹೇಳಿದ್ದೇವೆ. "There shall be levied and collected a tax calculated at the rate of ten percent on each payment for admission to or participation in an amusement. The tax so levied shall be paid by the proprietor. Provided that no tax shall be levied where the payment for admission excluding the amount of tax, is less than fifty rupees." 4(ಇ) ಏನು ಹೇಳುತ್ತದೆ ಎಂಬುದರ ಬಗ್ಗೆ ಕೇವಲ ಅಮ್ಯೂಸ್‌ಮೆಂಟ್ ಪಾರ್ಕ್‌ಗೆ ಸೀಮಿತವಾಗಿದೆ ಎಂದು ಹೇಳಿದೆ.

ಶ್ರೀ ಡಿ.ಕೆ.ಶಿವಕುಮಾರ್: ನೀವು ಅಮ್ಯೂಸ್‌ಮೆಂಟ್ ಪಾರ್ಕ್ ಎಂದು specify ಮಾಡಿ ಸಾರ್. ನೀವು ಇಲ್ಲಿ ಏನು ಹೇಳಿದ್ದೀರಿ, Tax on Amusement ಎಂದು ಹೇಳುತ್ತೀರಿ. You make it Amusement Park, as a definition.

ಶ್ರೀ ಎಂ.ಪಿ. ಪ್ರಕಾಶ್ (ಗೃಹ ಸಚಿವರು): ಇಲ್ಲಿ ತಾವು ಗಮನಿಸಬೇಕಾದುದು ಎಂದರೆ, Wherever any person is levied or is supposed to pay cash or make payment for admission inside or to participate in that, ಅದು ಯಾವುದೇ ಅಮ್ಯೂಸ್‌ಮೆಂಟ್ ಇರಲಿ, ಅವನು ಅದಕ್ಕಾಗಿಯೇ ಪ್ರವೇಶ ಧನವನ್ನು ಕೊಟ್ಟು ಒಳಗಡೆ ಪ್ರವೇಶ ಮಾಡುತ್ತಿದ್ದರೆ ಅಥವಾ ಅದರಲ್ಲಿ ಭಾಗಿಯಾಗಿದ್ದರೆ ಆ ಎಲ್ಲಾ ವಿನೋದಾವಳಿಗಳು ಕೂಡ ಈ ವ್ಯಾಪ್ತಿಗೆ ಬರುತ್ತದೆ.

ಶ್ರೀ ಜೆ.ಸಿ.ಮಾಧುಸ್ವಾಮಿ: Horse racing is also same. For horse racing also there is an entry fee.

ಶ್ರೀ ಎಂ.ಪಿ.ಪ್ರಕಾಶ್: Horse racing comes under a separate Act.

ಶ್ರೀ ಕೆ.ಜಿ.ಬೋಪಯ್ಯ: Amusement is different, gambling is different. ಇದರಲ್ಲಿ ಬಹಳ ಸ್ಪಷ್ಟವಾಗಿದೆ.

ಶ್ರೀ ಎನ್.ಧರ್ಮಸಿಂಗ್: ಇದರ ಬಗ್ಗೆ ತಾವು specific ಮಾಡಬೇಕು.

ಶ್ರೀ ಯಡಿಯೂರಪ್ಪ: ಗೌರವಾನ್ವಿತ ಸದಸ್ಯರಿಗೆ ನಾನು ಸ್ಪಷ್ಟ ಮಾಡುವುದಕ್ಕೆ ಇಚ್ಛೆ ಪಡುತ್ತೇನೆ. ಅಮ್ಯೂಸ್‌ಮೆಂಟ್ ಪಾರ್ಕ್ ಎಂದರೆ, 4(ಇ) definition ಇದೆ. ಅವರಿಗೆ ಮಾತ್ರ ಸೀಮಿತವಾಗಿ 10% ಇರುವುದನ್ನು 5% ಗೆ ಇಳಿಸುತ್ತಿದ್ದೇವೆ.

ಶ್ರೀ ಎನ್.ಧರ್ಮಸಿಂಗ್: ಅದು ಇಲ್ಲಿ ಬೇಕಲ್ಲವೇ? You have to define here. ನಿಮ್ಮಲ್ಲಿ ಆಗಬೇಕಲ್ಲ, ಅದು ಇಲ್ಲಿ ಬಿಲ್‌ನಲ್ಲಿ ಇಲ್ಲ.

ಶ್ರೀ ಬಿ.ಎಸ್.ಯಡಿಯೂರಪ್ಪ: ನೋಡಿ ಸಾರ್ 4(ಇ) ಎಂದು ಹೇಳಿಬಿಟ್ಟು Tax on Amusement ಎಂದು ಹೇಳಿದ್ದೇವೆ.

ಶ್ರೀ ಡಿ.ಕೆ.ಶಿವಕುಮಾರ್: Amusement Park ಎಂದು ಹೇಳಿ. Amusement ಎಂದು ಹೇಳಬೇಡಿ.

ಶ್ರೀ ಬಿ.ಎಸ್.ಯಡಿಯೂರಪ್ಪ: ಆ ರೀತಿ ಮಾಡುವುದಕ್ಕೆ ಬರುವುದಿಲ್ಲ ಸ್ವಾಮಿ.

ಶ್ರೀ ಡಿ.ಕೆ.ಶಿವಕುಮಾರ್: ಮಾಡಿ ಸ್ವಾಮಿ, ಏನಿದೆ ಸ್ವಾಮಿ internal ನಲ್ಲಿ ಅಮೆಂಡ್‌ಮೆಂಟ್ ತನ್ನಿ. ಈಗಲೇ join ಮಾಡಿ ಸ್ವಾಮಿ, ಇದರಲ್ಲಿ ನಮ್ಮದೇನು ಅಭ್ಯಂತರವಿಲ್ಲ.

ಶ್ರೀ ಎನ್.ಎಲ್.ನರೇಂದ್ರಬಾಬು: ಇದರಲ್ಲಿ ಒಂದು ಸ್ಪಷ್ಟೀಕರಣವನ್ನು ಕೊಡಬೇಕು. ಇದರ ಬಗ್ಗೆ specific ಆಗಿ ಹೇಳದೇ ಹೋದರೆ ನಾವು Fun World ನ್ನು ನೋಡಿದ್ದೇವೆ. Amusement Park ಎಂದು ಇದೆ. ಅಲ್ಲಿ ಒಂದೊಂದು ಆಟವನ್ನು ಆಡುವುದಕ್ಕಾಗಿಯೇ 100–200 ರೂಪಾಯಿಗಳನ್ನು ತೆಗೆದುಕೊಳ್ಳುತ್ತಾರೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ಅಲ್ಲಿ ಯಾವುದೇ ರೀತಿಯ entertainment programme ಗಳು ಇದ್ದರೆ ನಾವು ಏನು ಟಿಕೇಟ್‌ನ್ನು ತೆಗೆದುಕೊಂಡು ಒಳಗಡೆ ಹೋಗುತ್ತೇವೆ. ಅದು 10% ಇರುವುದನ್ನು 5%ಗೆ ಇಳಿಸುವುದನ್ನು ಮಾಡಿದ್ದೇವೆ. ಅದು ಯಾವುದೇ ರೀತಿಯ ಅಮ್ಯೂಸ್‌ಮೆಂಟ್ ಇರಬಹುದು. ಅಮ್ಯೂಸ್‌ಮೆಂಟ್, ಅಮ್ಯೂಸ್‌ಮೆಂಟ್ ಪಾರ್ಕ್, ಇದಕ್ಕೆ ಮತ್ತೊಂದು ತಿದ್ದುಪಡಿಯ ಅಗತ್ಯವಿಲ್ಲ. ಇಲ್ಲಿ ನಾನು ಮಾಡುವುದಕ್ಕೆ ಏನು ಕಳೆದುಕೊಳ್ಳಬೇಕಾಗಿದೆ.

ಶ್ರೀ ಡಿ.ಕೆ.ಶಿವಕುಮಾರ್: To be very clear.

ಶ್ರೀ ಬಿ.ಎಸ್.ಯಡಿಯೂರಪ್ಪ: Act ನಲ್ಲಿ Amusement ಎಂದು ಇದೆ. ಹೊಸದಾಗಿ ಏನು ಇಲ್ಲ. ಇದರಲ್ಲಿ ಸೇರಿಸುವ ಅಗತ್ಯವೇ ಇಲ್ಲ. Amusement means.....

ಶ್ರೀ ಎನ್.ಎಲ್.ನರೇಂದ್ರಬಾಬು: ಕೈಗಾರಿಕಾ ಪಾರ್ಕ್, ಈ ಎಲ್ಲಾ ಪಾರ್ಕುಗಳಿಗೆ ಸಾಮಾನ್ಯ ಜನರು ಹೋಗುವುದಕ್ಕಾಗುವುದಿಲ್ಲ. ಅದನ್ನು ಕಡಿಮೆ ಮಾಡುವುದಕ್ಕೆ ಅರ್ಥವೇ ಇಲ್ಲ. 150, 250, 300, 400, ಈ ತರಹದ ಟಿಕೇಟುಗಳ ಸಹ ಇದ್ದು 150 ರೂಪಾಯಿ ಟಿಕೇಟು ಸಹ ಸಿಗುವುದಿಲ್ಲ. ಇದರ ಜೊತೆಗೆ skilled games ಎಂದು ಇನ್ನೊಂದು ಶುರು ಮಾಡಿಕೊಂಡಿದ್ದಾರೆ. ಈ ಲೂಟಿ ಮಾಡುವುದಕ್ಕೆ tax exempition ಏತಕ್ಕಾಗಿ ಕೊಡಬೇಕೆಂದು ನನ್ನ ಪ್ರಶ್ನೆಯಾಗಿದೆ.

ಶ್ರೀ ಎಂ.ಪಿ.ಪ್ರಕಾಶ್: ಸನ್ಮಾನ್ಯ ಅಧ್ಯಕ್ಷರೆ, ನಾನು ಎರಡು ವಿಷಯಗಳ ಬಗ್ಗೆ ಸ್ಪಷ್ಟೀಕರಣವನ್ನು ಕೊಡುವುದಕ್ಕೆ ಬಯಸುತ್ತೇನೆ. ಯಾವುದೇ ಮನರಂಜನೆ ನಡೆಯುವಂತಹ ಸ್ಥಳದಲ್ಲಿ ಒಬ್ಬ ವ್ಯಕ್ತಿ ಪ್ರವೇಶ ಧನವನ್ನು ಕೊಟ್ಟು ಪ್ರವೇಶ ಮಾಡುತ್ತಾರೆ, ಅಥವಾ ಅದರಲ್ಲಿ ಭಾಗಿಯಾಗುತ್ತಾನೆ, ಆತನಗೆ ಇದು 4A ಕೆಳಗೆ ಬರುತ್ತದೆ ಎಂದು ಸ್ಪಷ್ಟವಾಗಿ ಹೇಳಿದ್ದೇವೆ. ಅದು ಅಮ್ಯೂಸ್‌ಮೆಂಟ್ ಪಾರ್ಕ್ ಆಗಿರಬಹುದು, ಇನ್ಯಾವುದೇ ತರಹವಾದಂತಹ ಇರಬಹುದು, ಅದಕ್ಕೆ in the definition it is stated, "Admission includes admission as a spectator or as one of the audiences and admission for the purpose of amusement by taking part in the entertainment. Admission to entertainment includes admission to any place in which entertainment is held." ಆದ್ದರಿಂದ ಇದು ಒಂದು, ಮಾನ್ಯ ಮಾಧುಸ್ವಾಮಿಯವರು ರೇಸ್‌ಕೋರ್ಸ್‌ಗೆ ಏನು? ಇದಕ್ಕೆ ಪ್ರತ್ಯೇಕವಾದಂತಹ ಕಾನೂನು ಇದೆ. ಅಲ್ಲಿ admission ಪ್ರಶ್ನೆ ಎಲ್ಲಿ ಬರುತ್ತದೆಂದರೆ, it is a gambling, it is a betting. ಅಲ್ಲಿ ಪ್ರಶ್ನೆ ಇರುವಂತಹದ್ದು, it is not an amusement, but it is a betting, gambling. ಅವರು ಅದರಲ್ಲಿ ಪಣವನ್ನು ಕಟ್ಟುತ್ತಾರೆ. ದುಡ್ಡು ಕಟ್ಟುತ್ತಾನೆ. ಅದರ ಮೇಲೆ ಅವನು ಜೂಜಾಡುತ್ತಾನೆ. ಇಲ್ಲಿ ನಾವು in entertainment ಹೋಗಿ ನಾವು ಪ್ರದರ್ಶನವನ್ನು ಸಂತೋಷ ಪಡಿ ಎಂದು ಹೇಳುವುದು. ಆ ಸಂತೋಷ

ಪಟ್ಟುಕೊಂಡು ಬರುವುದಕ್ಕಾಗಿ ಹೋಗುವುದಕ್ಕೆ ಪ್ರವೇಶ ಧನ ಏನು ಕೊಟ್ಟಿರುತ್ತೇವೆ. ಅದರಲ್ಲಿ ಈ ಟ್ಯಾಕ್ಸ್‌ನ್ನು ಆಕರಣೆ ಮಾಡುವಂತಹದ್ದು will not come.

ಶ್ರೀ ಕೆ.ಶ್ರೀನಿವಾಸಗೌಡ: ಕುದುರೆ ರೇಸ್‌ಗೆ ಹೋಗುವವರು ದುಡ್ಡು ಕಟ್ಟಬೇಕೆಂದು ಏನು ಇಲ್ಲ, ಅವನು ಕೂಡ entertainment ನೋಡಲಿಕ್ಕೆ ಹೋಗಬಹುದಲ್ಲ. ನಾನು ಗ್ಯಾಂಬಲಿಂಗ್ ಆಡುವುದಿಲ್ಲ. ಆಗ ತಾವು ಏನು ಮಾಡುತ್ತೀರಿ?

ಶ್ರೀ ವಾಟಾಳ್ ನಾಗರಾಜ್: ಆಡುವುದಕ್ಕೂ ಕೂಡ ಹೋಗಬಹುದು, ನೋಡುವುದಕ್ಕೂ ಕೂಡ ಹೋಗಬಹುದು.

ಶ್ರೀ ಎಂ.ಪಿ.ಪ್ರಕಾಶ್: ತಾವು ಈಗ ಏನೆಂದು ಹೇಳಿದಿರಿ. ಕುದುರೆ ಜೂಜು ಎಂದು ಹೇಳಿದಿರಿ. ಕುದುರೆ ಓಟ ಎಂದು ಹೇಳಲಿಲ್ಲ.

ಶ್ರೀ ವಾಟಾಳ್ ನಾಗರಾಜ್: ಎರಡು ತರಹ ಇದೆ. ಓಟ ಎಂದು ಮಾಡಿ.

ಶ್ರೀ ಎಂ.ಪಿ.ಪ್ರಕಾಶ್: ಅದು ಬೇರೆ ಕಾನೂನಿನ ಕೆಳಗಡೆ ಬರುತ್ತದೆ.

ಶ್ರೀ ವಾಟಾಳ್ ನಾಗರಾಜ್: ಓಟ ಎಂದು ಮಾಡೋಣ.

ಶ್ರೀ ಎಂ.ಪಿ.ಪ್ರಕಾಶ್: ಅದು ಇಲ್ಲ. ಅರ್ಥ ಕೊಡುವುದಕ್ಕೆ ಬರುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್: ನಾವು ಪ್ರವೇಶ ಧನದ ಬಗ್ಗೆ ತಾನೇ ಮಾತನಾಡುತ್ತಿರುವುದು. ಪ್ರವೇಶಕ್ಕೆ ಹೋಗುವಂತಹವರು, ಜೂಜುಗೋಸ್ಕರ ಹೋಗುತ್ತಾರಾ ಅಥವಾ ನೋಡುವುದಕ್ಕೆ ಹೋಗುತ್ತೀರಾ? ಇದು ಯಾವುದು ಎಂದು ಹೇಳಿ ನೀವು ಸ್ಪಷ್ಟಪಡಿಸಿ ಬಿಟ್ಟರೆ ಸಾಕು.

ಶ್ರೀ ಎಂ.ಪಿ.ಪ್ರಕಾಶ್: ಇದರಲ್ಲಿ ಸ್ಪಷ್ಟ ಪಡಿಸುವಂತಹದ್ದು ಏನು ಇಲ್ಲ. ಯಾವುದೇ ambiguity ಇಲ್ಲ. ಅಸ್ಪಷ್ಟತೆಇಲ್ಲ, ಇದನ್ನು ಸಮ್ಮನೆ ಗೊಂದಲ ಮಾಡುವುದರಲ್ಲಿ ಅರ್ಥವಿಲ್ಲ. ಮೊದಲು ಇರುವುದೇ ಸರಿಯಾಗಿದೆ.

ಶ್ರೀ ಎನ್.ಧರ್ಮಸಿಂಗ್: ಯಾವುದೇ ಒಂದು Act if it is not clearly spelt....

ಶ್ರೀ ಎಂ.ಪಿ.ಪ್ರಕಾಶ್: It is a time-tested one. Every Act will not enumerate everything.

ಶ್ರೀ ಎನ್.ಧರ್ಮಸಿಂಗ್: ಬೇರೆ ರೀತಿಯಲ್ಲಿ interpret ಮಾಡಿದರೆ ಅದು misuse ಆಗುತ್ತದೆ.

ಶ್ರೀ ಎನ್.ಎಲ್.ನರೇಂದ್ರಬಾಬು: ಏನು ಒಂದು ಆಗಬೇಕು. ಕನ್ನಡ ಸಿನಿಮಾಗಳಿಗೆ ಇದನ್ನು ಕಡಿಮೆ ಮಾಡಿದರೆ ಪರವಾಗಿಲ್ಲ, ಇವರಿಗೆ ಏತಕ್ಕಾಗಿ ಅನುಕೂಲವನ್ನು ಮಾಡಿದ್ದೀರಿ. ಇವರು ಜನರಿಗಂತೂ ಕಡಿಮೆ ಮಾಡುವುದಿಲ್ಲ. ಸುಮ್ಮನೆ ಅವರಿಗೆ ಲಾಭವನ್ನು ಮಾಡಿರುವುದಕ್ಕೆ ಕೊಟ್ಟಿರುವಂತಹದ್ದು. ಅವರಿಗೆ ಕೊಡುವುದು ಅಗತ್ಯವಿಲ್ಲ. ರಂಗಭೂಮಿಯವರಿಗೆ ಏನೋ ಸಹಾಯವನ್ನು ಮಾಡಿದರೆ ಪರವಾಗಿಲ್ಲ. ಇದರಲ್ಲಿ Five Star culture ನವರು ಎಲ್ಲರೂ axle blade ಹಾಕುವವರು. ಇವರು ಏನು ಜನರಿಗೆ ರೇಟ್ ಏನು ಕಡಿಮೆ ಮಾಡುವುದಿಲ್ಲ.

ಶ್ರೀ ಡಿ.ಆರ್.ಪಾಟೀಲ್: ಮಾನ್ಯ ಯಡಿಯೂರಪ್ಪನವರಿಗೆ ಈ ಮೋಜಿನ ಜೂಜಿಗೆ ಕಡಿಮೆ ಮಾಡಬೇಕೆಂಬ ವಿಚಾರ ಏತಕ್ಕಾಗಿ ಬಂತು ಗೊತ್ತಿಲ್ಲ. ಇದರೊಳಗಿರುವ provision ನೋಡಿ, 50 ರೂಪಾಯಿಗಳಿಗಿಂತ ಕಡಿಮೆ ಟಿಕೆಟ್ ಇದ್ದರೆ ಅದಕ್ಕೆ ಇಲ್ಲವೆಂದು ತಾವು ಹೇಳುತ್ತೀರಿ. 50 ರೂಪಾಯಿಗಿಂತ ಹೆಚ್ಚು ಕೊಟ್ಟು ಆಟ ಮತ್ತು ನೋಟವನ್ನು ನೋಡುವುದಕ್ಕೆ ಹೋಗುವವರಿಗೆ ಏತಕ್ಕಾಗಿ ಕಡಿಮೆ ಮಾಡುತ್ತೀರಿ. ಸರ್ಕಾರಕ್ಕೆ ಹಣ ಬಂದರೆ ಬರಲಿ ಬಿಡಿ. ಇನ್ನು 10% ಇರುವುದನ್ನು 20% ಮಾಡಿ. ಅದನ್ನು ಏತಕ್ಕಾಗಿ 5% ಮಾಡುವುದಕ್ಕೆ ಹೋಗುತ್ತೀರಿ?

ಶ್ರೀ ಬಿ.ಎಸ್.ಯಡಿಯೂರಪ್ಪ: ಈ ಬಗ್ಗೆ ವ್ಯಾಪಕವಾದ ಚರ್ಚೆ ಕ್ಯಾಬಿನೆಟ್‌ನಲ್ಲಿ ಆಗಿದೆ. ಬೇರೆ ರಾಜ್ಯಗಳಲ್ಲಿ 7 ವರ್ಷಗಳಲ್ಲಿ ಪೂರ್ಣ ವಿನಾಯಿತಿಯನ್ನು ನೀಡಿದ್ದಾರೆ. ಇಲ್ಲಿ ಅವರು ನಮಗೆ ಪೂರ್ಣ ವಿನಾಯಿತಿ ಕೊಡಿ ಎಂದು ಕೇಳಿದ್ದರು. ಇದರ ಬಗ್ಗೆ ಕ್ಯಾಬಿನೆಟ್‌ನಲ್ಲಿ ವ್ಯಾಪಕವಾದ ಚರ್ಚೆಯಾದ ಮೇಲೆ 10% ನಂದ 5% ಗೆ ಇಳಿಸುವಂತೆ ಆಯಿತು.

ಮನೋರಂಜನೆಗೆ ಹಾಗೂ ಪ್ರವಾಸೋದ್ಯಮಕ್ಕೆ ಹೆಚ್ಚು ಒತ್ತು ಕೊಡಬೇಕೆಂಬ ದೃಷ್ಟಿ ಬಿಟ್ಟರೆ ಬೇರೆ ಯಾವ ಕಾರಣವು ಇಲ್ಲ. ಇದಕ್ಕೆ ತಾವು ದಯಮಾಡಿ ಒಪ್ಪಿಗೆ ಕೊಡಬೇಕೆಂದು ಕೋರುತ್ತೇನೆ.

ಶ್ರೀ ಜೆ.ಸಿ.ಮಾಧುಸ್ವಾಮಿ: ನಮ್ಮದು ಅಮ್ಯೂಸ್‌ಮೆಂಟ್ ಪಾರ್ಕ್‌ಗಳಿಗೆ ಕಡಿಮೆ ಮಾಡುವುದಕ್ಕೆ ನಮ್ಮದು ಯಾವ ತಕರಾರು ಇಲ್ಲ. ನಾವು ಇದರಲ್ಲಿ clear ಆಗಿಲ್ಲವೆಂದು ನಾವು ಹೇಳುತ್ತಿದ್ದೇವೆ. ರೇಸ್ ಆಡುವುದು ಬೆಟ್ಟಿಂಗ್ ಆಗುತ್ತದೆ, ರೇಸ್ ನೋಡುವುದು entertainment ಆಗುತ್ತದೆ. ನಾನು ಆಡುವುದಕ್ಕೆ ಹೋಗುವುದಿಲ್ಲ, ನೋಡುವುದಕ್ಕೆ ಹೋಗುತ್ತೇನೆ. You cannot restrict my entry into race course. You cannot charge under betting. ನೀವು ರೂ. 10–00, 20–00 entry fees ಇಟ್ಟಿರುತ್ತೀರಿ, ಅದು entertainment, bet ಮಾಡುವುದೇ ಬೇರೆ, entertainment ಮಾಡುವುದು ಬೇರೆ ಆಗುತ್ತದೆ. ಎರಡೂ attract ಆಗುತ್ತದೆ. ಅದೇ ಬೇರೆ ಆಗುತ್ತದೆ, ಮತ್ತೆ ಏನಾಗುತ್ತದೆಂದರೆ, ಇದರಲ್ಲಿ ನೀವು ಭಾಗಿಯಾಗುವವನಿಗೆ ಹೇಳುತ್ತೀರಿ. It may cover cables also, televisions also. ನಮಗೆ ಹೇಳಬೇಕು, ನಾವು ದಡ್ಡರಲ್ಲವೇ. ನಮಗೆ ಗೊತ್ತಿಲ್ಲವಲ್ಲ ಅದೆಲ್ಲಾ, amusement ಎಂಬ ಒಂದು ಪದವನ್ನು ಬಳಸಿರುವುದನ್ನು ಬಿಟ್ಟರೆ Amusement define ಮಾಡುವುದಿಲ್ಲ, Amusement park ಎಂದು ಸೇರಿಸಿ ಎಂದರೂ ಆಗುವುದಿಲ್ಲ ಎನ್ನುತ್ತೀರಿ.

ಶ್ರೀ ಬಿ.ಎಸ್.ಯಡಿಯೂರಪ್ಪ (ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಹಣಕಾಸಿನ ಸಚಿವರು):– English copy ಯಲ್ಲಿ 4E ನಲ್ಲಿ Tax on amusement ಎಂದು ಬಹಳ ಸ್ಪಷ್ಟವಾಗಿದೆ. ಎರಡನೆಯದು amusement...

Sri D.K.Shivakumar:- It is not coming under tourism. It is coming under Entertainment Tax Act. ಆ Entertainment Tax Act ಬಂದಂಥ ಸಂದರ್ಭದಲ್ಲಿ ನೀವು video ಗೆ, above video ಎಂದು ಹೇಳಬಹುದು. ಇನ್ನೊಂದು ವಿಡಿಯೋಗೆ ಹೇಳಬಹುದು, ಇದರಲ್ಲಿ confusion ಇದೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ಕುದುರೆ ರೇಸಿನಲ್ಲಿ ಕಲಂ 3ರ ಅಡಿಯಲ್ಲಿ ಶೇಕಡ 70ರಷ್ಟು... ಬೇರೆ ಇದರಲ್ಲಿ ನಾವು ಕೊಟ್ಟಿದ್ದೇವೆ.

ಶ್ರೀ ಡಿ.ಕೆ.ಶಿವಕುಮಾರ್:– ನೀವು ಈಗ ಯಾವುದೋ ಒಂದು ಕಂಪೆನಿ ಬಗ್ಗೆ ಓದಿದರಲ್ಲ. Neeladri ಪಾರ್ಕ್ ಮುಚ್ಚಿ ಹೋಯಿತು, ಸ್ಯಾಮಿ ಡ್ರೀಮ್ ಮುಚ್ಚಿ ಹೋಯಿತು, ಇದೆಲ್ಲಾ ಕರ್ನಾಟಕದಲ್ಲಿ seasonal business. ಇವೆಲ್ಲಾ ಆಗುವುದಿಲ್ಲ. ಟೂರಿಸಂ encourage ಮಾಡಬೇಕು. ನಮ್ಮಲ್ಲಿಲ್ಲ. ಮಕ್ಕಳಿಗೆ ಅವಕಾಶ ಮಾಡಿಕೊಡಬೇಕು. Yes, fine, ನೀವು ಅದನ್ನು ಇಂಥದ್ದಕ್ಕೆ ಮಾತ್ರ ನಾವು ಅವಕಾಶ ಕೊಟ್ಟಿದ್ದೇವೆಂದು specify ಮಾಡಿ.

ಶ್ರೀ ಬಿ.ಎಸ್.ಯಡಿಯೂರಪ್ಪ:– ಈ ಮನೆಯಲ್ಲಿ ನಾನು ಭರವಸೆ ಕೊಡುತ್ತಿದ್ದೇನೆ. Amusement park ಎಂದು ನಾನೇನು definition ಹೇಳಿದ್ದೇನೆ, ಅವರಿಗೆ ಮಾತ್ರ 10% ನಿಂದ 5% ಎಂದು ಮಾಡುತ್ತಿದ್ದೇವೆ. ದಯಮಾಡಿ ಇದಕ್ಕೆ ತಾವು ಅವಕಾಶವನ್ನು ಮಾಡಿಕೊಡಬೇಕು.

ಶ್ರೀ ಡಿ.ಕೆ.ಶಿವಕುಮಾರ್:– Park ಎಂಬ ಪದವನ್ನು ಇದರಲ್ಲಿ ಸೇರಿಸಿ ಬಿಡಿ. Amusement park ಎಂದು ಸೇರಿಸಿ ಬಿಡಿ ಸಾಕು, ನಂತರ ನೀವು 5% ಕೊಡುವುದು ಬೇಡ, zero ಮಾಡಿ ಬಿಡಿ.

ಶ್ರೀ ಎಂ.ಪಿ.ಪ್ರಕಾಶ್ (ಮಾನ್ಯ ಗೃಹ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು):– Amusement ಎಂಬ ಪದಕ್ಕೆ definition original Act ನಲ್ಲಿದೆ. The Karnataka Entertainments Tax Act of 1958 ಅದರಲ್ಲಿರುವ definition column section 2(b)(a):

"Amusement means, any amusement that includes playing game or skill or a machine or riding on a machine or any other carriage or any other contraption or a boat or other vessel or playing in any enclosure of water body or any other specifically designed or developed on demarcated surface or area or participating in any kind of contest or game chance or skill, or talent held or organized, or provided any amusement, arcade or amusement park or any other place for which persons are required to make a payment for admission or participation." This is very

very clear. Amusement ಅಂದರೆ ಮನುಷ್ಯ ಅನೇಕ amusements ಅನ್ನು ಅವನು ತನ್ನ ವಿನೋದಕ್ಕಾಗಿ ಸೃಷ್ಟಿ ಮಾಡಿಕೊಳ್ಳುತ್ತಾನೆ. ಅದನ್ನು ಪ್ರತಿಯೊಂದರಲ್ಲಿ ನಮೂದಿಸತಕ್ಕದ್ದು, ಎಲ್ಲಿ ಆತ ಪ್ರವೇಶ ದರವನ್ನು ಕೊಡುತ್ತಾನೆ, ಎಲ್ಲಿ ಆತ ಭಾಗಿಯಾಗುತ್ತಾನೆ, ಆಗ ಮಾಡತಕ್ಕಂಥದ್ದು, ರೇಸ್‌ಕೋರ್ಸ್‌ನಲ್ಲಿರುವುದು ಬೇರೆ, ಈಗ ಇಸ್ಪೀಟು ಆಟಗಳು ನಡೆಯುತ್ತವೆ. ಅಂದರ್ ಬಹಾರ್ ಆಟ ಆಡುತ್ತಾರೆ, ಅಂದರ್ ಬಹಾರ್ ಆಡತಕ್ಕಂಥ ಸಮಯದಲ್ಲಿ It is a game of a luck, it is not a skill, ಅದು ಬೇರೆ, ಅಂಥ ಸಂದರ್ಭದಲ್ಲಿ ಒಬ್ಬನು ಹಿಂದೆ ಸುಮ್ಮನೆ ಕುಳಿತಿರುತ್ತಾನೆ, ಅವನನ್ನು ಹಿಡಿದುಕೊಂಡು ಬರುತ್ತಾರೆ. ಇಲ್ಲ ನಾನು ಸುಮ್ಮನೆ ಕುಳಿತಿದ್ದೆ, ನಾನೇನು ಆಡುತ್ತಿರಲಿಲ್ಲ. ಬೆಟ್ ಕಟ್ಟಿರಲಿಲ್ಲ ಅಂದರೆ, ಬೆಟ್ ಕಟ್ಟುವುದು ಮುಖ್ಯವಾಗುವುದಿಲ್ಲ. ಅಲ್ಲಿ participate ಮಾಡುವುದೇನದೆ, ಅದೂ ಕೂಡ ಬಹಳ ಮುಖ್ಯವಾಗುತ್ತದೆ. ಆದ್ದರಿಂದ ರೇಸ್‌ಕೋರ್ಸ್ ಲೆಕ್ಕಕ್ಕೆ ಬರುವುದಿಲ್ಲ. ಈಗ Rowlett ಆಡುತ್ತಿರುತ್ತಾರೆ, that is game of chance. Rowlett ನಲ್ಲಿ ಬಂದಂಥ ಸಂದರ್ಭದಲ್ಲಿಯೂ ಕೂಡ ನಾವು ಸುಮ್ಮನೆ ನಂತಿದ್ದೆವು, ಇದರಲ್ಲಿ ಬೆಟ್ ಕಟ್ಟಿಲ್ಲ ಎಂದರೆ ಆಗುವುದಿಲ್ಲ. You are also guilty for that ಎಂದು ಹೇಳುತ್ತಾರೆ. ಈಗಾಗಲೇ ತಾವು ರೇಸ್‌ಕೋರ್ಸ್ ಬಗ್ಗೆ ಹೇಳಿದಾಗ ಅದಕ್ಕೆ ಸೆಪರೇಟ್ ಆದಂಥ ಕಾನೂನು ಇರುವುದರಿಂದ 70% ಮನರಂಜನೆ ತೆರಿಗೆಯನ್ನು ಅದರಲ್ಲಿ ಹಾಕುತ್ತಿದ್ದೇವೆ. ಕಾನೂನು ಬೇರೆ ಇದೆ.

ಶ್ರೀ ಕೆ.ಶ್ರೀನಿವಾಸಗೌಡ:– ಮಾನ್ಯ ಅಧ್ಯಕ್ಷರೆ, ಕ್ಯಾಸಿನೋ open ಆಗುತ್ತದೆ.

ಅಧ್ಯಕ್ಷರು:– ಕೇಳಿ, ಅನುಮಾನ ಪರಿಹಾರ ಮಾಡಿಕೊಳ್ಳಲಿ.

ಶ್ರೀ ಕೆ.ಶ್ರೀನಿವಾಸಗೌಡ:– ಈ ಬಿಲ್ ಇರುವುದರಿಂದ ನೀವು ಸ್ವಲ್ಪ ಕ್ಯಾಸಿನೋ ಮಾಡುವಾಗ ಅದನ್ನು ನೋಡಲಿಕ್ಕೆ ಕೆಲವರು ಒಳಗೆ ಹೋಗುತ್ತಾರೆ. ಕೆಲವರು ಆಡಲಿಕ್ಕೂ ಹೋಗುತ್ತಾರೆ, ಆಗ ನೀವು ಯಾವ ರೀತಿ treat ಮಾಡುತ್ತೀರಿ ಹೇಳಿ ನೋಡೋಣ.

ಶ್ರೀ ಎಂ.ಪಿ.ಪ್ರಕಾಶ್:– ಕ್ಯಾಸಿನೋ ಮಾಡುವಾಗ ಲೈಸೆನ್ಸ್ ತೆಗೆದುಕೊಳ್ಳುತ್ತಾನೆ. ಅದಕ್ಕೆ entertainment tax ಹಾಕಿರುತ್ತಾರೆ. ಅದರ ಮೇಲೆ

ಆಗುತ್ತದೆ. ಇಲ್ಲಿ ರೇಸ್‌ಕೋರ್ಸ್‌ನಲ್ಲಿ ಹೋದಂತಹವರು ಹಣ ಕಟ್ಟದೇ ಸುಮ್ಮನೆ ನೋಡಿ ಬರಬಹುದು. ಆದರೂ ಕೂಡ ಅದಕ್ಕೆ ಪ್ರತ್ಯೇಕವಾದ ಕಾನೂನು ಇದೆ. ಇವುಗಳನ್ನೆಲ್ಲಾ ಹೊರತುಪಡಿಸಿರತಕ್ಕಂಥದ್ದರಲ್ಲಿ ಪ್ರವೇಶ ದರವನ್ನು ಕೊಡಬೇಕು. Amusement park also attracts the taxes.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ:– Amusement park ಅಂದರೆ

ಶ್ರೀ ಎಂ.ಪಿ.ಪ್ರಕಾಶ್:– Other than amusement park any other things ಇಲ್ಲಿ ಹೇಳುತ್ತಾರೆ. "Participating in any contest or a game of chance or a skill or a talent held, or organized, or provided in any amusement, arcade, or any other place for which persons are required to pay for admission or participation" ಎಂದು ಇದೆ. ಪಾರ್ಕ್ ಎಂದು ಹೇಳಿ ನಮ್ಮಷ್ಟಕ್ಕೆ ನಾವೇ ಏತಕ್ಕೆ ಹಗ್ಗ ಕೊಟ್ಟು ಕೈ ಕಟ್ಟಿಸಿಕೊಳ್ಳಬೇಕು. ಜಾತ್ರೆಯೊಳಗೆ ಸುಮ್ಮ ಸುಮ್ಮನೆ ಆಟ ಆಡುತ್ತಾರೆ, Rowlett ಆಡುತ್ತಾರೆ ಅದು ಕೂಡ ಇದೆ.

ಶ್ರೀ ಬಿ.ಸಿ.ಪಾಟೀಲ್:– ಮಾನ್ಯ ಅಧ್ಯಕ್ಷರೆ, ಈ act ಅನ್ನು amendment ಮಾಡುವ ಉದ್ದೇಶ ಪ್ರವಾಸಿಗರನ್ನು ಆಕರ್ಷಿಸಲಿಕ್ಕೆ ಎಂದು ಹೇಳಿದ್ದಾರೆ. 10% ನಿಂದ 5%ಗೆ ಇಳಿಸಿದ್ದೇವೆಂದು ಹೇಳಿದರು, ಅದು amusement park ಇರಬಹುದು ಅಥವಾ ಯಾವುದೇ ಇರಬಹುದು. Entry tax Rs. 100–00 fix ಮಾಡಿದ್ದರೆ 10–00 ರೂ.ಗಳ ಟ್ಯಾಕ್ಸ್ ಸರ್ಕಾರಕ್ಕೆ ಬರುತ್ತಿತ್ತು. ಈಗ 5–00 ರೂ.ಗಳನ್ನು ಕಡಿಮೆ ಮಾಡುವುದರಿಂದ 95–00 ರೂ.ಗಳನ್ನು ಆತ ಮಾಡುವುದಿಲ್ಲ. ಆ 100–00 ರೂ.ಗಳ ದರವನ್ನೇ ನಿಗದಿಪಡಿಸುತ್ತಾನೆ. ಆಗ ಅವನಿಗೆ 95–00 ರೂ.ಗಳು Amusument park ನಲ್ಲಿ ಸಿಗುತ್ತದೆ. ಇದರಿಂದ ಅವನಿಗೆ benefit ಆಗುತ್ತದೆಯೇ ಹೊರತು ಪ್ರವಾಸಿಗನಿಗೆ, ಪ್ರೇಕ್ಷಕನಿಗೆ ಯಾವುದೇ ರೀತಿಯ ಅನುಕೂಲವಾಗುವುದಿಲ್ಲ. ಇದರಿಂದ ಸರ್ಕಾರದ ಬೊಕ್ಕಸಕ್ಕೂ ಹೊಡೆತ ಬೀಳುತ್ತದೆ. ಜೊತೆಗೆ ಅವರನ್ನು ನಾವು ಬೆಳೆಸಿದಂತಾಗುತ್ತದೆ.

ಡಾ.ಕೆ.ಅನ್ನದಾನಿ:– ಮಾನ್ಯ ಅಧ್ಯಕ್ಷರೇ, ಈಗ Wonderla entry fees 250–00 ರೂ.ಗಳನ್ನು ತೆಗೆದುಕೊಳ್ಳುತ್ತಾರೆ. ಅದಕ್ಕೆ ಇಲ್ಲ ಎಂದು

ಹೇಳುತ್ತಾರೆ, 50–00 ರೂ. ಕಡಿಮೆ ಇರುವುದಕ್ಕೆ ಮಾತ್ರ ಎಂದು ಹೇಳುತ್ತಾರೆ. 250–00 ರೂ.ಗಳನ್ನು ಯಾರು ಕೊಡುತ್ತಾರೆ? ನಾವು ಮಕ್ಕಳನ್ನು ಕರೆದುಕೊಂಡು 250–00 ರೂ. ಕೊಟ್ಟು ಒಳಗೆ ಹೋಗಬೇಕು. ಅದನ್ನೆಲ್ಲಾ ಪೂರ್ತಿಯಾಗಿ ಹಾಗೆ ಮಾಡಿ ಬಿಡಿ.

ಅಧ್ಯಕ್ಷರು:– ಆಯಿತು. ಏನು ಉತ್ತರ ಕೊಡುತ್ತಾರೆ ನೋಡೋಣ.

ಶ್ರೀ ಬಿ.ಎಸ್.ಯಡಿಯೂರಪ್ಪ:– ಸನ್ಮಾನ್ಯ ಅಧ್ಯಕ್ಷರೇ, 50–00 ರೂ.ಗಳಿಗಿಂತ ಒಳಗೆ ಟಿಕೆಟ್ charges ಇದ್ದರೆ ಅದಕ್ಕೆ tax ಇಲ್ಲ. 50.00 ರೂ. ಮೇಲ್ಪಟ್ಟು ರೇಟ್ ಹಾಕಿದಾಗ ನಾವು 10% ಗೆ ಬದಲು 5% ಮಾಡಿದ್ದೇವೆ. ದಯಮಾಡಿ ಇದಕ್ಕೆ ಅನುಮತಿ ಕೊಡಬೇಕೆಂದು ವಿನಂತಿಸುತ್ತೇವೆ.

ಕರ್ನಾಟಕ ಮನರಂಜನೆ ತೆರಿಗೆ (ತಿದ್ದುಪಡಿ) ವಿಧೇಯಕ, 2007

ಪರ್ಯಾಲೋಚನಾ ಪ್ರಸ್ತಾವ

ಅಧ್ಯಕ್ಷರು;– "2007ರ ಕರ್ನಾಟಕ ಮನರಂಜನೆ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು.

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

ಖಂಡ 2

ಅಧ್ಯಕ್ಷರು:– "ಖಂಡ 2 ವಿಧೇಯಕದ ಅಂಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ವಿಧೇಯಕಕ್ಕೆ ಸೇರಿಸಲಾಯಿತು)

ಖಂಡ 1 ಇತ್ಯಾದಿ

ಅಧ್ಯಕ್ಷರು:– ಪ್ರಸ್ತಾವ ಏನೆಂದರೆ;

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಬಿ.ಎಸ್.ಯಡಿಯೂರಪ್ಪ (ಮಾನ್ಯ ಉಪ ಮುಖ್ಯಮಂತ್ರಿ):– ಮಾನ್ಯ ಅಧ್ಯಕ್ಷರೇ, 2007ನೇ ಸಾಲಿನ ಕರ್ನಾಟಕ ಮನೋರಂಜನಾ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು:– ಪ್ರಸ್ತಾವ ಏನೆಂದರೆ;

"2007ನೇ ಸಾಲಿನ ಕರ್ನಾಟಕ ಮನೋರಂಜನಾ ತೆರಿಗೆ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

(ಅನುಬಂಧ–3)

4. ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) ವಿಧೇಯಕ, 2007

ಶ್ರೀ ಬಸವರಾಜ್ ಎಸ್.ಹೊರಟ್ಟಿ (ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು):– ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) ವಿಧೇಯಕ, 2007 ಅನ್ನು ವಿಧಾನ ಸಭೆಯಿಂದ ತಿದ್ದುಪಡಿಗಳೊಂದಿಗೆ ಅಂಗೀಕೃತವಾದ ಹಾಗೂ ವಿಧಾನ ಪರಿಷತ್ತಿನ ಪರಿಶೀಲನಾ ಸಮಿತಿಯು ಮಾರ್ಪಡಿಸಿದ ರೀತ್ಯಾ ವಿಧೇಯಕವನ್ನು ಪರಿಶೀಲಿಸಿ ಕರ್ನಾಟಕ ವಿಧಾನ ಪರಿಷತ್ತಿನಲ್ಲಿ ತಿದ್ದುಪಡಿಗಳೊಂದಿಗೆ ಅಂಗೀಕರಿಸಲ್ಪಟ್ಟ 2007ನೇ ಸಾಲಿನ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) ವಿಧೇಯಕವನ್ನು ಪುನರ್ ಪರ್ಯಾಲೋಚಿಸಬೇಕೆಂದು ವಿನಂತಿಸುತ್ತೇನೆ.

ಶ್ರೀ ಜೆ.ಸಿ.ಮಾಧುಸ್ವಾಮಿ:– ನಾವೆಲ್ಲಾ ಅನುಮೋದನೆ ಮಾಡಿದ್ದೇವೆ.